ಆ) ರಾಯಚೂರು ಯೋಜನಾ ಜಿಲ್ಲೆ (ರಾಯಚೂರು ಮತ್ತು ಕೊಪ್ಪಳ)

ಕೊಪ್ಪಳ ಜಿಲ್ಲೆಯ (ರಾಯಚೂರು ಯೋಜನಾ ಜಿಲ್ಲೆ) ಕುಷ್ಟಗಿ ತಾಲ್ಲೂಕಿನ ಹನುಮನಹಾಳ, ನಿಲಗೋಲ, ತುಗ್ಗಲದೋಣಿ, ಹುಲಿಗೇರಾ ಮತ್ತು ಚಲಗೇರ ಗ್ರಾಮಗಳಲ್ಲಿ ಪರಿಸರ ನೈರ್ಮಲ್ಯ (ಚರಂಡಿ ಇತ್ಯಾದಿ) ಕಾಮಗಾರಿಗಳನ್ನು ಕಳಪೆ ಗುಣಮಟ್ಟದಲ್ಲಿ ಅನುಷ್ಠಾನಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿತ್ತು. ಈ ಕಾಮಗಾರಿಗಳ ಪರಿವೀಕ್ಷಣೆ ಮತ್ತು ಪ್ರಾರಂಭಿಕ ತನಿಖೆಯಲ್ಲಿ ಕಳಪೆ ಕಾಮಗಾರಿ ಹಾಗೂ ಕೆಲಸ ಮಾಡಿರುವುದಕ್ಕಿಂತ ಹೆಚ್ಚಿನ ಅಳತೆ ಮಾಡಿರುವುದು ಕಂಡುಬಂದಿರುತ್ತದೆ. ತನಿಖೆಯ ಪ್ರಕಾರ ರೂ. 39.75 ಲಕ್ಷಗಳ (5 ಗ್ರಾಮಗಳಿಗೆ) ಹೆಚ್ಚುವರಿ ಮೊತ್ತ ಪಾವತಿಯಾಗಿರುತ್ತದೆಂದು ಅಂದಾಜು ಮಾಡಲಾಗಿರುತ್ತದೆ.

ಶಿವಮೊಗ್ಗ ಯೋಜನಾ ಜಿಲ್ಲೆ (ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು)

ಶಿವಮೊಗ್ಗ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅವರ ದಿನಾಂಕ 10-12-2001ರ ಪತ್ರದಲ್ಲಿ ಶಿವಮೊಗ್ಗ ತಾಲ್ಲೂಕು ಹಾರನಹಳ್ಳಿ ಗ್ರಾಮದ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆದಾರರಿಗೆ ರೂ. 8.18 ಲಕ್ಷಗಳ ಹೆಚ್ಚುವರಿ ಹಣ ಪಾವತಿ ಮಾಡಲಾಗಿರುತ್ತದೆಂದು ವರದಿ ಮಾಡಿರುತ್ತಾರೆ.

ಬೀದರ್ ಯೋಜನಾ ಜಿಲ್ಲೆ

ಬೀದರ್ ಜಿಲ್ಲೆಯಲ್ಲಿ ನೀರು ಸರಬರಾಜು ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವ ಗುತ್ತಿಗೆ ದಾರರಿಗೆ ರೂ. 46.60 ಲಕ್ಷಗಳ ಹೆಚ್ಚುವರಿ ಹಣ ಪಾವತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿತ್ತು.

ಇ) ಓರ್ವ ಕಾರ್ಯಪಾಲಕ ಅಭಿಯಂತರರು, ಮೂರು ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಭಾರ ಕಾರ್ಯಪಾಲಕ ಅಭಿಯಂತರರು) ಮತ್ತು ಸಹಾಯಕ ಅಭಿಯಂತರರ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ಯೂನಿವರ್ಸಿಟಿಗಳಲ್ಲಿ ಸಿ.ಇ.ಟಿ. ಮಾದರಿಯಲ್ಲಿ ಮೌಲ್ಯಮಾಪನ ಪಾರದರ್ಶಕತೆಯನ್ನು ತರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1120(912)

ಪ್ರಶ್ನೆ ಕೇಳಿರುವ ಸದಸ್ಯರು : ಶ್ರೀ ಜಯಪ್ರಕಾಶ್ ಹೆಗ್ಡೆ.ಕೆ(ಬ್ರಹ್ಮಾವರ)

ಉತ್ತರಿಸುವ ಸಚಿವರು: ಡಾ॥ ಜಿ.ಪರಮೇಶ್ವರ(ಉನ್ನತ ಶಿಕ್ಷಣ ಸಚಿವರು)

ಪ್ರಶ್ನೆ

ಅ) ವಿಶ್ವವಿದ್ಯಾಲಯಗಳ ವತಿಯಿಂದ ನಡೆಯುವ ಪರೀಕ್ಷೆಗಳಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವ ಕುರಿತು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ವೃತ್ತಿಶಿಕ್ಷಣ (ಸಿಇಟಿ) ಪರೀಕ್ಷೆಗಳಲ್ಲಿ ಅನುಸರಿಸುವ ವಿದ್ಯಾರ್ಥಿಗಳಿಗೆ ಅವರುಗಳ ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿಯನ್ನು ಶುಲ್ಕವಿಧಿಸಿ ಕೋರಿಕೆಯ ಮೇರೆಗೆ ಒದಗಿಸಿಕೊಡುವ ಕ್ರಮದಂತೆ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿಯೂ ಅನುಸರಿಸಲು ಸರ್ಕಾರ ಕ್ರಮ ಜರುಗಿಸುವುದೇ?

ಇ) ಇಂಥ ಪಾರದರ್ಶಕ ಕ್ರಮಗಳಿಂದ ಮೌಲ್ಯಮಾಪನ ಕಾರ್ಯ ಹಾಗೂ ವಿದ್ಯಾರ್ಥಿಗಳಿಗೆ ತಮ್ಮ ದಕ್ಷತೆಯನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುವುದರಿಂದ ಆ ಕುರಿತು ಸರ್ಕಾರ ಪರಿಶೀಲಿಸುವುದೇ?

ಉತ್ತರ

ಅ) ಮೈಸೂರು ವಿಶ್ವವಿದ್ಯಾಲಯದಲ್ಲಿ ಉತ್ತರ ಪತ್ರಿಕೆಗಳನ್ನು ಕೋಡಿಂಗ್ ಮೂಲಕ ಮೌಲ್ಯಮಾಪನ ಮಾಡಲಾಗುತ್ತಿದೆ. ಸ್ನಾತಕೋತ್ತರ ಪರೀಕ್ಷೆಗಳಲ್ಲಿ ದ್ವಿಮೌಲ್ಯಮಾಪನ ಪದ್ಧತಿ ಇದೆ. ಹೊರ ವಿಶ್ವವಿದ್ಯಾಲಯದ ಅಧ್ಯಾಪಕರಿಂದ ಮೌಲ್ಯಮಾಪನ ಮಾಡಿಸಲಾಗುತ್ತಿದೆ. ಉತ್ತರ ಪತ್ರಿಕೆಯ ಜೆರಾಕ್ಸ್ ಪ್ರತಿಯನ್ನು ನೀಡಲಾಗುತ್ತಿದೆ.

ಆ) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಕೋಡಿಂಗ್ ಪದ್ಧತಿ ಜಾರಿಯಲ್ಲಿದೆ. ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಯನ್ನು ನೀಡಲಾಗುತ್ತಿದೆ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೋಡಿಂಗ್ ಮತ್ತು ಡೀಕೋಡಿಂಗ್ ಮತ್ತು ಥಾಲೆಂಜ್ ವ್ಯಾಲುಯೇಷನ್ ಪದ್ಧತಿ ಜಾರಿಯಲ್ಲಿದೆ. ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಯನ್ನು ಒದಗಿಸಲಾಗುತ್ತಿದೆ. ಜಾಗೃತ ದಳಗಳನ್ನು ರಚಿಸಿ ಪರೀಕ್ಷಾ ಕೇಂದ್ರಗಳಿಗೆ ಆಕಸ್ಮಿಕ ಭೇಟಿ ನೀಡಲಾಗುತ್ತಿದೆ.

ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಕೋಡಿಂಗ್ ಮತ್ತು ಡಿ-ಕೋಡಿಂಗ್, ಮರು ಮೌಲ್ಯಮಾಪನ ಪದ್ಧತಿಗಳು ಜಾರಿಯಲ್ಲಿವೆ. ಸ್ನಾತಕ ಕೋರ್ಸುಗಳ ಉತ್ತರ ಪತ್ರಿಕೆಗಳ

ಜೆರಾಕ್ಸ್ ಪ್ರತಿಯನ್ನು ನೀಡಲಾಗುತ್ತಿದೆ.

ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪುನರ್ ಮೌಲ್ಯಮಾಪನ ಅಭ್ಯರ್ಥಿಗಳು ಖುದ್ದಾಗಿ ಉತ್ತರಗಳ ಪತ್ರಿಕೆಗಳನ್ನು ಪರಿಶೀಲಿಸುವುದು, ಮತ್ತು ಝೆರಾಕ್ಸ್ ಪ್ರತಿಗಳ ಪೂರೈಕೆ ಜಾರಿಯಲ್ಲಿದೆ.

ಕುವೆಂಪು ವಿಶ್ವವಿದ್ಯಾಲಯದಲ್ಲಿ ಮೌಲ್ಯ ಮಾಪನ ಮಾಡಿದ ಉತ್ತರ ಪತ್ರಿಕೆಗಳನ್ನು ನೋಡಲು ಅವಕಾಶವಿದೆ. ಜೆರಾಕ್ಸ್ ಪ್ರತಿಗಳನ್ನು ಪೂರೈಸಲಾಗುತ್ತಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಯನ್ನು ಒದಗಿಸಲಾಗುತ್ತಿದೆ. ಸ್ನಾತಕೋತ್ತರ ಕೋರ್ಸುಗಳಲ್ಲಿ ದ್ವಿತೀಯ ಮೌಲ್ಯಮಾಪನ ಪದ್ಧತಿ ಇದೆ. ಉತ್ತರ ಪತ್ರಿಕೆಗಳ ಮರು ವಿಶ್ಲೇಷಣಾ ಪದ್ಧತಿ ಇದೆ. ಪರೀಕ್ಷಾ ಕಾರ್ಯಗಳನ್ನು ಗಣಕೀಕರಣ ಮಾಡಲಾಗಿದೆ.

ಮುಕ್ತ ವಿಶ್ವವಿದ್ಯಾಲಯದಲ್ಲಿ ಕೇಂದ್ರಿಕೃತ ಮೌಲ್ಯಮಾಪನ ವ್ಯವಸ್ಥೆ ಇದೆ. ಕೋಡಿಂಗ್ ಮತ್ತು ದ್ವಿಮೌಲ್ಯಮಾಪನ ಪದ್ಧತಿ ಇದೆ. ಚಾಲೇಂಜ್ ಮೌಲ್ಯಮಾಪನ ಪದ್ಧತಿ ಜಾರಿಯಲ್ಲಿದೆ. ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಗಳನ್ನು ಪೂರೈಸಲಾಗುತ್ತಿದೆ.

ಇ) ಮೇಲೆ ವಿವರಿಸಿದಂತೆ ಮೌಲ್ಯಮಾಪನ ಕಾರ್ಯದಲ್ಲಿ ಪಾರದರ್ಶಕತೆ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉಡುಪಿಯಲ್ಲಿರುವ ಯಕ್ಷಗಾನ ಕಲಾ ಕೇಂದ್ರಕ್ಕೆ ಬಿಡುಗಡೆ ಮಾಡುತ್ತಿರುವ ಅನುದಾನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1121(1430)

ಸದಸ್ಯರ ಹೆಸರು: ಶ್ರೀ ಜಯಪ್ರಕಾಶ್ ಹೆಗ್ಡೆ(ಬ್ರಹ್ಮಾವರ)

ಉತ್ತರಿಸುವ ಸಚಿವರು: ಶ್ರೀಮತಿ ರಾಣಿ ಸತೀಶ್(ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು)

ಪ್ರಶ್ನೆ

ಅ) ಉಡುಪಿಯಲ್ಲಿರುವ ಯಕ್ಷಗಾನ ಕಲಾ ಕೇಂದ್ರಕ್ಕೆ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿರುವ ವರ್ಷವಾರು ಅನುದಾನ ಎಷ್ಟು? ಕಲಾ ಕೇಂದ್ರದ ಬೇಡಿಕೆ ಎಷ್ಟು?